# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ :- 04/02/2022 ರಂದು ವಾರ್ಡ್-31ರ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿ

**ಸಭೆಗೆ ಹಾಜರಿದ್ದ ಅಧಿಕಾರಿಗಳು ಮತ್ತು ಸಾರ್ವಜನಿಕರು :-**

- ಶ್ರೀ.ರವಿವಡ್ಡರ್, ನೋಡಲ್ ಅಧಿಕಾರಿ ವಾರ್ಡ್ ಸಂಖ್ಯೆ-31.
- ಶ್ರೀ. ಬಸವರಾಜು, ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ-31.
- ಶ್ರೀ. ವಿನಯ, ಕಿರಿಯ ಆರೋಗ್ಯ ಪರೀವಿಕ್ಷಕರು ವಾರ್ಡ್ ಸಂಖ್ಯೆ-31.
- ಶ್ರೀ. ಹರೀಶ್, ಕಂದಾಯ ಅಧಿಕಾರಿಗಳು ವಾರ್ಡ್ ಸಂಖ್ಯೆ-31.
- ಶ್ರೀ. ರಾಹುಲ್, ಸಿವಿಲ್ ಇಂಜಿನೀಯರ್ ಬಿ.ಡಬ್ಲೂ.ಎಸ್.ಎಸ್.ಬಿ ವಾರ್ಡ್ ಸಂಖ್ಯೆ-31.
- ಶ್ರೀ. ಅಕ್ಕಮ್ಮ, ಎಲೆಕ್ಟ್ರಿಕಲ್ ಇಂಜಿನೀಯರ್ ಬೆಸ್ಕಾಮಂ ವಾರ್ಡ್ ಸಂಖ್ಯೆ-31.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೋಡಲ್ ಅಧಿಕಾರಿರವರು ಎಲ್ಲಾ ಸದಸ್ಯರು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿದರು. ವಾರ್ಡ್-31 ರ ವಾರ್ಡ್ ಸಮಿತಿ ಸಭೆಯನ್ನು ತಮಿಳ್ ಸಂಘ ಸ್ಕೂಲ್‌ನಲ್ಲಿ ನಡೆಸಲಾಯಿತು. ನೋಡಲ್ ಅಧಿಕಾರಿಗಳು ವಾರ್ಡ್‌ನ ಸಾರ್ವಜನಿಕರ ಕುಂದು ಕೊರತೆಗಳನ್ನು ಸದಸ್ಯರು ಮತ್ತು ಅಧಿಕಾರಿಗಳ ಜೋತೆಯಲ್ಲಿ ಚರ್ಚಿಸಿದರು ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳವ ಬಗ್ಗೆ ಸಂಬಂದಪಟ್ಟ ಅಧಿಕಾರಿ ಹಾಗೂ ನೌಕರರುಗಳಿಗೆ ಈ ಕೆಳಕಂಡತೆ ತಿಳಿಸಲಾಗಿರುತ್ತದೆ.

➢ **ಕಾಮಗಾರಿ ಇಲಾಖೆಗೆ ಸಂಬಂದಿಸಿರುವುದು**

1. ವಾರ್ಡ್ ವ್ಯಾಪ್ತಿಯ ಸೌಕಾರ್ ಲೇನ್ ಮುಖ್ಯ ರಸ್ತೆಯಲ್ಲಿನ ಕಲ್ವರ್ಟ್ ಮೇಲಿನ ಸ್ಲಾಬ್‌ಗಳನ್ನು ಬದಲಿಸಲು ವಾರ್ಡ್ ಇಂಜಿನಿಯರ್‌ರವರಿಗೆ ಸೂಚಿಸಿದರು.
2. ವಾರ್ಡ್ ವ್ಯಾಪ್ತಿಯಲ್ಲಿನ ಶಾಂಪುರ ಮುಖ್ಯ ರಸ್ತೆ ಗುಂಡಿಗಳನ್ನು ಮುಚ್ಚಲು ಕೂಡಲೆ ಕ್ರಮ ವಹಿಸಲು ಸೂಚಿಸಿದರು.

**ಕ್ರಮ : ಈ ಮೇಲೆ ಸೂಚಿಸಿರುವಂತಹ ಸಮಸ್ಯೆಗಳಿಗೆ ಪರಿಹರಿಸುವಂತೆ ವಾರ್ಡ್ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು**

➢ **ಘನತ್ಯಾಜ್ಯ ಇಲಾಖೆಗೆ ಸಂಬಂದಿಸಿರುವುದು**

1. ಕಿರಿಯ ಆರೋಗ್ಯ ಪರೀವಿಕ್ಷಕರು ಇಂದಿನ ಸಭೆಯಲ್ಲಿ ಎದ್ದುನಿಂತು ಇಂದು 57–ಪೌರಕಾರ್ಮಿಕರು, 18–ಆಟೋ, 3–ಕಾಂಪ್ಯಾಕ್ಟರ್ ಹಾಜರಾಗಿವೆ ಎಂದು ತಿಳಿಸಿದರು.
2. ವಾರ್ಡ್ ವ್ಯಾಪ್ತಿಯಲ್ಲಿನ ಬಸವನಗರನಲ್ಲಿ ಕಸ ನಿರ್ವಹಣೆ ಸರಿಯಾಗಿ ಮಾಡುತ್ತಿಲ್ಲ, ಕೂಡಲೆ ಈ ಸಮಸ್ಯೆ ಪರಿಹರಿಸಲು ಕಿರಿಯ ಆರೋಗ್ಯ ಪರೀವಿಕ್ಷಕರಿಗೆ ಸೂಚಿಸಿದರು.
3. ವಾರ್ಡ್ ವ್ಯಾಪ್ತಿಯಲ್ಲಿ ಕಸ ವಿಗಂಡನೆ ಸರಿಯಾಗಿ ನಿರ್ವಹಣೆಯಾಗುತ್ತಿಲ್ಲ ಕೂಡಲೆ ಹಸಿ ತ್ಯಾಜ್ಯ ಮತ್ತು ಒಣತ್ಯಾಜ್ಯ ವಿಗಂಡಣೆ ಮಾಡಲು ಸೂಚಿಸಿದರು.

**ಕ್ರಮ ಕಿರಿಯ ಆರೋಗ್ಯ ಪರೀವಿಕ್ಷಕರು ಈ ಮೇಲೆ ಸೂಚಿಸಿರುವ ಸಮಸ್ಯೆಗಳಿಗೆ ಕೂಡಲೆ ಕ್ರಮ ವಹಿಸಲು ಸೂಚಿಸಿದರು.**

➢ **ಬಿ.ಡಬ್ಲೂ.ಎಸ್.ಎಸ್.ಬಿ ಇಲಾಖೆಗೆ ಸಂಬಂಧಿಸಿರುವುದು**

1. ವಾರ್ಡ್ ವ್ಯಾಪ್ತಿಯಲ್ಲಿನ ಶಾಂಪುರ ಮುಖ್ಯ ರಸ್ತೆಯಲ್ಲಿ ಸ್ಯಾನಿಟರಿ ಕಾಮಗಾರಿ ನಿರ್ವಹಿಸಿದ್ದು ರಸ್ತೆಯಲ್ಲಿರುವ ಮಣ್ಣನ್ನು ತೇರುವುಗೊಳಿಸಿ ವೆಟ್ ಮಿಕ್ಸ್ ಹಾಕಲು ಸೂಚಿಸಿದರು.
2. ವಾರ್ಡ್ ವ್ಯಾಪ್ತಿಯಲ್ಲಿ ಪ್ರತಿ ಮನೆಗೆ ವಾಟರ್ ಮೀಟರ್ ಹೆಚ್ಚಿನ ಸಂಖ್ಯೆಯಲ್ಲಿ ಹಾಕಿಸಿಕೋಳ್ಳಲು ಸಾರ್ವಜನಿಕರಿಗೆ ಅರಿವು ಮೂಡಿಸಲು ಸೂಚಿಸಿದರು.

**ಕ್ರಮ : ಈ ಮೇಲೆ ಸೂಚಿಸಿರುವಂತಹ ಸಮಸ್ಯೆಗಳನ್ನು ಪರಿಹರಿಸುವಂತೆ ಸಹಾಯಕ ಅಭಿಯಂತರರಿಗೆ ಈ ಸಭೆ ಮುಖಾಂತರ ಸೂಚಿಸಲಾಯಿತು.**

➢ **ಸ್ಟ್ರೀಟ್ ಲೈಟ್ ಇಲಾಖೆಗೆ ಸಂಬಂದಿಸಿರುವುದು**

1. ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳು ಹೆಚ್ಚಾಗಿ ರೀಪೇರಿಗಳಿಗೆ ಒಳಗಾಗುತ್ತಿದ್ದು ಕೂಡಲೆ ಕಾರ್ಯಾಚರಣೆ ನಿರ್ವಹಿಸಲು ಸೂಚಿಸಿದರು.

**ಕ್ರಮ : ಈ ಮೇಲೆ ಸೂಚಿಸಿರುವಂತಹ ಸಮಸ್ಯೆಗೆ ಪರಿಹರಿಸುವಂತೆ ಕಾಮಗಾರಿ ಸೂಪರ್‌ವೈಸರ್‌ಗೆ ಸೂಚಿಸಿದರು.**

ಈ ಎಲ್ಲಾ ವಿಷಯಗಳ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸಂಬಂದಪಟ್ಟವರಿಗೆ ಸೂಚಿಸುತ್ತಾ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದೆ.

**ನೋಡಲ್ ಅಧಿಕಾರಿ/ ಸದಸ್ಯ ಕಾರ್ಯದರ್ಶಿ**
**ವಾರ್ಡ್–31**

<u>ಪ್ರತಿಗಳನ್ನು:</u>

- ಮಾನ್ಯ ಆಡಳಿತಾಧಿಕಾರಿರವರ ಅಪ್ತ ಶಾಖೆಗೆ ಸಲ್ಲಿಸಿ ಆಡಳಿತಾಧಿಕಾರಿರವರ ಗಮನಕ್ಕೆ ತರಲು ಕೋರಿದೆ.
- ಮಾನ್ಯ ಆಯುಕ್ತರುರವರ ಅಪ್ತಶಾಖೆಗೆ ಸಲ್ಲಿಸಿ ಆಯುಕ್ತರವರ ಗಮನಕ್ಕೆ ತರಲು ಕೋರಿದೆ
- ಮಾನ್ಯ ವಲಯ ಆಯುಕ್ತರುರವರ ಅಪ್ತಶಾಖೆಗೆ ಸಲ್ಲಿಸಿ ಆಯುಕ್ತರವರ ಗಮನಕ್ಕೆ ತರಲು ಕೋರಿದೆ.
- ಮಾನ್ಯ ಜಂಟಿ ಆಯುಕ್ತರು (ಪೂರ್ವ) ರವರ ಅಪ್ತಶಾಖೆಗೆ ಸಲ್ಲಿಸಿ ಅಯುಕ್ತರವರ ಗಮನಕ್ಕೆ ತರಲು ಕೋರಿದೆ.
- ಮುಖ್ಯ ಅಭೀಯಂತರರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
- ಕಾರ್ಯಪಾಲಕ ಅಭಿಯಂತರರು, ಮಲ್ಲೇಶ್ವರಂ ರವರ ಮಾಹಿತಿಗಾಗಿ ಸಲ್ಲಿಸಿದೆ.
- ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಜಿ.ಹಳ್ಳಿ ಉಪ–ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
- ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನ ತ್ಯಾಜ್ಯ) ಮಲಕೇಶಿನಗರ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
- ಸಹಾಯಕ ಕಂದಾಯ ಅಧಿಕಾರಿ (ಕೆ.ಜಿ. ಹಳ್ಳಿ) ಉಪವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
- ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ನೇತಾಜಿ ರಸ್ತೆ ರವರ ಮಾಹಿತಿಗಾಗಿ ಸಲ್ಲಿಸಿದೆ.
- ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) ರವರ ಮಾಹಿತಿಗಾಗಿ ಸಲ್ಲಿಸಿದೆ.
- ಹಿರಿಯ ವೈಧ್ಯಾಧಿಕಾರಿಗಳು (ಮಲಿಕೇಶಿನಗರ) ರವರ ಮಾಹಿತಿಗಾಗಿ ಸಲ್ಲಿಸಿದೆ
- ಸಹಾಯಕ ನಿರ್ದೇಶಕರು (ಪೂರ್ವ) ಪಶು ಪಾಲನೆ ಇಲಾಖೆ ರವರ ಮಾಹಿತಿಗಾಗಿ ಸಲ್ಲಿಸಿದೆ.
- ವಲಯ ಅರಣ್ಯಾಧಿಕಾರಿಗಳು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
- ಕಛೇರಿ ಪ್ರತಿ.